**ಕರ್ನಾಟಕ ಸರ್ಕಾರ**

ಸಂ:ಆಇ 01 ಟಿಎಫ್‌ಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:10.06.2020.

**ಸುತ್ತೋಲೆ**

ವಿಷಯ:-ಯೂಸರ್ ಚಾರ್ಜಸ್, ಫೀ ಮತ್ತು ದಂಡನೆ ಮುಂತಾದವುಗಳ ರಾಜಸ್ವಗಳನ್ನು ಸಂಚಿತ ನಿಧಿಗೆ ಜಮೆ ಮಾಡುವ ಬಗ್ಗೆ.

****-****

ಕ.ಆ.ಸಂ. ಅನುಚ್ಛೇಧ-4(ಎ) ಪ್ರಕಾರ ಸ್ವೀಕರಿಸಲಾದ ಎಲ್ಲಾ ಹಣವನ್ನು ಯಾವುದೇ ಸಂದರ್ಭದಲ್ಲಿಯೂ ಸಹ ಅನಾವಶ್ಯಕ ವಿಳಂಬವಿಲ್ಲದೆ ಎರಡು ದಿನಗಳೊಳಗಾಗಿ ಸರ್ಕಾರಿ ಖಜಾನೆಗೆ ಜಮೆ ಮಾಡುವಂತೆ ನಿಯಮದಲ್ಲಿ ಹೇಳಲಾಗಿದೆ ಹಾಗೂ ಕ.ಆ.ಸಂ. ಅನುಚ್ಛೇದ 5 ರ ನಿಯಮಗಳ ಪ್ರಕಾರ ಇಲಾಖಾ ಆದಾಯಗಳನ್ನು, ನಿರ್ದಿಷ್ಟ ಅಧಿಕಾರವಿದ್ದಲ್ಲದೆ, ಇಲಾಖಾ ವೆಚ್ಚಗಳಿಗಾಗಿ ವಿನಿಯೋಗಿಸುವುದನ್ನು ಕಟ್ಟುನಿಟ್ಟಾಗಿ ಪ್ರತಿಬಂದಿಸಲಾಗಿದೆ.

ಸರ್ಕಾರದ ಸಂಖ್ಯೆ:ಎಫ್‌ಡಿ 715 ಎಫ್‌ಆರ್ 2003, ದಿ:23.01.2004 ರ ಸುತ್ತೋಲೆಯಲ್ಲಿ ರಾಜ್ಯ ಸರ್ಕಾರದಿಂದ ಸಂಗ್ರಹಿಸಲಾಗುವ ಯೂಸರ್ ಚಾರ್ಜಸ್, ಫೀ ಮತ್ತು ದಂಡನೆ ಮುಂತಾದವುಗಳ ರಾಜಸ್ವಗಳನ್ನು ಕ.ಆ.ಸಂ. ನಿಯಮಗಳಾನುಸಾರ ನಿಗದಿತ ಅವಧಿಯೊಳಗೆ ಸರ್ಕಾರಿ ಖಜಾನೆಗೆ ಸಂದಾಯ ಮಾಡುವಂತೆ ಮತ್ತು ಇಲಾಖಾ ವೆಚ್ಚಗಳಿಗೆ ಉಪಯೋಗಿಸದಂತೆ ತಿಳಿಸಲಾಗಿದೆ.

ಸರ್ಕಾರದ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುವ ನಿಗಮ/ಮಂಡಳಿಗಳಿಗೆ ಸೇರಿದ ಭೂಮಿ/ ಕಟ್ಟಡವು ರಾಜ್ಯ ಸರ್ಕಾರದ ಆಸ್ತಿಯೆಂದು ಪರಿಗಣಿಸಬೇಕಾಗಿದ್ದು ಇವುಗಳ ಮಾರಾಟದಿಂದ ಬಂದಂತಹ ಮೊತ್ತ ಅಥವಾ ಭೂ ಪರಿಹಾರ ಮೊತ್ತಗಳನ್ನು ಬಂಡವಾಳ ಸ್ವೀಕೃತಿಯೆಂದು ಪರಿಗಣಿಸಲಾಗುತ್ತದೆ. ಆದರೆ, ನಿಯಮಾನುಸಾರ ಇಂತಹ ಸ್ವೀಕೃತಿಗಳನ್ನು ನಿಗದಿತ ಅವಧಿಯೊಳಗೆ ಸಂಚಿತ ನಿಧಿಗೆ ಜಮೆ ಮಾಡದೆ ನಿಗಮ / ಮಂಡಳಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ಕ.ಆ.ಸಂ. ಅನುಚ್ಛೇದ-4(ಎ) ರಂತೆ ಸ್ವೀಕೃತಿಗಳನ್ನು ಅನಾವಶ್ಯಕ ವಿಳಂಬವಿಲ್ಲದೆ ಎರಡು ದಿನಗಳೊಳಗಾಗಿ ಸರ್ಕಾರದ ಖಜಾನೆಗೆ ಜಮೆ ಮಾಡುವುದು ಕಡ್ಡಾಯವಾಗಿರುತ್ತದೆ. ಭೂಮಿ/ ಕಟ್ಟಡದ ಮಾರಾಟದಿಂದ ಬಂದಂತಹ ಮೊತ್ತ ಅಥವಾ ಭೂ ಪರಿಹಾರ ಮೊತ್ತ, ಯೂಸರ್ ಚಾರ್ಜಸ್, ಫೀ ಮತ್ತು ದಂಡ ಮೊತ್ತ ಮುಂತಾದವುಗಳನ್ನು ಇಲಾಖಾ ಆಡಳಿತ ವೆಚ್ಚಗಳಿಗೆ ವಿನಿಯೋಗಿಸುವುದನ್ನು ಕಟ್ಟುನಿಟ್ಟಾಗಿ ಪ್ರತಿಬಂಧಿಸಲಾಗಿದೆ. ಸರ್ಕಾರದಿಂದ ಸಹಾಯಾನುದಾನ ಪಡೆಯುವ ಎಲ್ಲಾ ನಿಗಮ/ಮಂಡಳಿಗಳಿಗೂ ಭೂಮಿ/ ಕಟ್ಟಡ ಮಾರಾಟ/ ಪರಭಾರೆಯಿಂದ ಬಂದಂತಹ ಮೊತ್ತವನ್ನು ಬ್ಯಾಂಕ್ ಖಾತೆಯಲ್ಲಿರಿಸಿಕೊಳ್ಳದೇ ಕಡ್ಡಾಯವಾಗಿ ಸಂಚಿತ ನಿಧಿಗೆ ಜಮೆ ಮಾಡುವಂತೆ ಸೂಚಿಸಲು ತಿಳಿಸಿದೆ.

10/6/2020
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

ಪ್ರತಿಗಳು:-

1. ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.

2. ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6. ಆಯುಕ್ತರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.
10. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು.
11. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
12. ಉಪ ನಿರ್ದೇಶಕರು, ಟಿಎನ್‌ಎಂಸಿ ಖನಿಜ ಭವನ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.